**ಕುಂಚ ಪ್ರಪಂಚ**

'ಸುಧಾ' 'ಕುಂಚ ಪ್ರಪಂಚ' ವಿಭಾಗಕ್ಕೆ ಮಕ್ಕಳೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ಭಾವಚಿತ್ರದ ಜೊತೆ ನಮಗೆ ಕಳುಹಿಸಿಕೊಡಿ.
ವಿಳಾಸ: editorsu@sudha.co.in







**ಕೀರ್ತಿ ಎ. ರಾವ್**
4ನೇ ತರಗತಿ
ಇನ್‌ಸೈಟ್ ಅಕಾಡೆಮಿ
ಬೆಂಗಳೂರು



**ಪಂಚಮಿ ಹೆಗ್ಡೆ**
3ನೇ ತರಗತಿ
ಅಮೃತಾ ವಿದ್ಯಾಲಯಂ
ಬೆಂಗಳೂರು



**ದಿಶಾ ವಿನೋದ್ ಕೇಣಿ**
7ನೇ ತರಗತಿ
ಕ್ರಿಸ್ಟ್ ಪಬ್ಲಿಕ್ ಶಾಲೆ
ಮೈಸೂರು



## ತಾಳ ಮೇಳ

ಬಾನಲಿ ಭಾಸ್ಕರ
ಮೂಡುವ ಮೊದಲೇ
ಹಕ್ಕಿಗಳುಲಿದವು
ಚಿಲಿಪಿಲಿ

ನೀಲಾಕಾಶದಿ
ಕವಿದವು ಮುಗಿಲು
ತಟ್ಟಿವೆ ತಾಳ
ಗುಡುಗುಡು

ಮಾಮರದೆಲೆಗಳ
ನಡುವೆ ಅಡಗಿಹ
ಕೋಗಿಲೆ ಕೂಗು
ಕುಹೂಕುಹೂ

ಬಂದಿದೆ ಮಳೆಯು
ಎಲ್ಲೆಡೆ ಜಲವು
ಹರಿಯುವ ನಾದ
ಜುಳುಜುಳು

ಪೇರಳೆಗಿಡದಲಿ
ಓಡಾಡಲು ಅಳಿಲು
ಬಿದ್ದಿತು ಹಣ್ಣು
ದಡೋಬುಡೋ

ನೋಡಲು ಕೇಳಲು
ಸಾರ್ಥಕ ಜೀವನ
ದೇವನೆ ನಿನಗಿದೊ
ನಮೋ ನಮೋ

■ ರವಿರಾಜ ಹಾಲಂಬಿ